# ಸಚಿವ ಶ್ರೀರಾಮುಲು ಅಸಮಾಧಾನ ಶಮನ

## ಯಡಿಯೂರಪ್ಪ ನಡೆಸಿದ ಸಂಧಾನ ಯಶಸ್ವಿ



ಬೆಂಗಳೂರು: ಖಾತೆ ಬದಲಾವಣೆಯಿಂದ ಬೇಸರಗೊಂಡಿದ್ದ ಸಮಾಜಕಲ್ಯಾಣ ಸಚಿವ ಬಿ.ಶ್ರೀರಾಮುಲು ಜತೆ ಮುಖ್ಯ ಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾಡಿರುವ ಸಂಧಾನ ಮಾತುಕತೆ ಯಶಸ್ವಿಯಾಗಿದೆ.

ಮಂಗಳವಾರ ರಾಮುಲು ಅವರೊಂದಿಗೆ ಮಾತುಕತೆ ನಡೆಸಿದ ಸಿಎಂ ಬಿಎಸ್‌ವೈ ಅವರು, ಖಾತೆ ಬದಲಾವಣೆಯ ಅನಿವಾರ್ಯತೆ ಮನವರಿಕೆ ಮಾಡಿ ಕೊಡುವ ಮೂಲಕ ಅಸಮಾಧಾನ ಶಮನಗೊಳಿಸಿದ್ದಾರೆ. ನಂತರ ಸಚಿವ ಡಾ.ಕೆ. ಸುಧಾಕರ್ ಅವರೊಂದಿಗೆ ಶ್ರೀರಾಮುಲು ಅವರು ಜಂಟಿಯಾಗಿ ಮಾಧ್ಯಮಗಳಿಗೆ ಹೇಳಿಕೆ ನೀಡಿ, ತಮಗೆ ಯಾವುದೇ ಅಸಮಾಧಾನವಿಲ್ಲ ಎಂದು ಹೇಳುವ ಮೂಲಕ ಪರಸ್ಪರ ಸಹಕಾರದೊಂದಿಗೆ ಮುಂದುವರಿಯುವುದಾಗಿ ವಿಶ್ವಾಸ ಮೂಡಿಸುವ ಪ್ರಯತ್ನ ಮಾಡಿದ್ದಾರೆ.

ಆರೋಗ್ಯ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಖಾತೆ ಹಿಂಪಡೆದು ಸಮಾಜ ಕಲ್ಯಾಣ ಖಾತೆ ಹಂಚಿಕೆ ಮಾಡಿದ್ದಕ್ಕೆ ಶ್ರೀರಾಮುಲು ತೀವ್ರ ಅಸಮಾಧಾನಗೊಂಡಿದ್ದರು. ಈ ಬಗ್ಗೆ ಸೋಮವಾರವೇ ಸಿಎಂ ಬಳಿ ಅಳಲು ತೋಡಿಕೊಂಡಿದ್ದರು. ಆಗಲೂ ಖಾತೆ ಬದಲಾವಣೆಯ ಉದ್ದೇಶ, ಅಗತ್ಯದ ಬಗ್ಗೆ ಮುಖ್ಯಮಂತ್ರಿ ಯಡಿಯೂರಪ್ಪ ಮನವರಿಕೆ ಮಾಡಿ ಕೊಟ್ಟಿದ್ದರು. ಆದರೆ, ರಾಮುಲು ಸಮಾಧಾನಗೊಂಡಿರಲಿಲ್ಲ.

▶ 7ನೇ ಪುಟಕ್ಕೆ

### ವಿಫಲ ಎಂದು ಹೇಳಲು ಸಾಧ್ಯವೇ?

ಡಾ. ಸುಧಾಕರ್ ಜವಾಬ್ದಾರಿ ವಹಿಸಿಕೊಂಡಾಗ ಬೆಂಗಳೂರಿನಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ದಿನಕ್ಕೆ 1000ದಷ್ಟು ವರದಿಯಾಗುತ್ತಿತ್ತು. ಆಮೇಲೆ 5000ಕ್ಕೆ ಏರಿಕೆಯಾಗಿದೆ. ಹಾಗೆಂದು ಸುಧಾಕರ್ ಅವರು ಜವಾಬ್ದಾರಿ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ ಎಂದು ಹೇಳಲು ಸಾಧ್ಯವೇ ಎಂದು ಶ್ರೀರಾಮುಲು ಪ್ರಶ್ನಿಸಿದ್ದಾರೆ. ಸೋಂಕು ನಿಯಂತ್ರಣಕ್ಕೆ ನಾವೆಲ್ಲಾ ಪ್ರಯತ್ನಿಸಿದ್ದೇವೆ. ತಾಂತ್ರಿಕ ಕಾರಣಕ್ಕೆ ಸುಧಾಕರ್‌ಗೆ ಆರೋಗ್ಯ ಖಾತೆ ನೀಡಲಾಗಿದೆ. ಎರಡೂ ಖಾತೆಯನ್ನು ಒಬ್ಬರೇ ನೋಡಿಕೊಳ್ಳಲಿ ಎಂದು ಸಿಎಂ ಬಿಎಸ್‌ವೈ ಈ ನಿರ್ಧಾರ ಕೈಗೊಂಡಿದ್ದಾರೆಯೇ ಹೊರತು ಖಾತೆ ನಿರ್ವಹಣೆಯಲ್ಲಿ ಅಸಮರ್ಥತೆ ಎಂಬುದಕ್ಕಲ್ಲ ಎಂದು ರಾಮುಲು ಸಮಜಾಯಿಷಿ ನೀಡಿದರು.

1 (a)

14/10/20

# ಸಚಿವ ರಾಮುಲು ಅಸಮಾಧಾನ ಶಮನ

1ನೇ ಪುಟದಿಂದ ▶ ಈ ಹಿನ್ನೆಲೆಯಲ್ಲಿ ಮಂಗಳವಾರ ಬೆಳಗ್ಗೆ 10ರ ಹೊತ್ತಿಗೆ 'ಕಾವೇರಿ'ಯಲ್ಲಿ ಯಡಿಯೂರಪ್ಪ ಹಾಗೂ ಶ್ರೀರಾಮುಲು ಭೇಟಿ ನಿಗದಿಯಾಗಿತ್ತು. ಅದೇ ಹೊತ್ತಿಗೆ ಸಚಿವ ಸುಧಾಕರ್ ಕೂಡ ಅಲ್ಲಿಗೆ ಆಗಮಿಸಿದರು. ಬಳಿಕ ಯಡಿಯೂರಪ್ಪ ಅವರು ಉಭಯ ಸಚಿವರೊಂದಿಗೆ ಮಾತುಕತೆ ನಡೆಸಿ ಖಾತೆ ಬದಲಾವಣೆ, ಹೊಸ ಜವಾಬ್ದಾರಿಗಳ ಹಂಚಿಕೆ ಅಗತ್ಯತೆಯನ್ನು ಮನವರಿಕೆ ಮಾಡಿಕೊಟ್ಟರು. ಜತೆಗೆ ಈ ಬಗ್ಗೆ ಜಂಟಿಯಾಗಿ ಸ್ಪಷ್ಟನೆ ನೀಡುವಂತೆಯೂ ಸೂಚಿಸಿದರು.

**ಡಾಕ್ಟರ್ ಚೆನ್ನಾಗಿ ಆರೋಗ್ಯ ನೋಡಿಕೊಳ್ಳುತ್ತಾರೆ:** ಜಂಟಿಯಾಗಿ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವ ಶ್ರೀರಾಮುಲು, ನಾನು ಬಹಳ ಸಂತೋಷದಿಂದ ಸಮಾಜ ಕಲ್ಯಾಣ ಖಾತೆ ಒಪ್ಪಿಕೊಂಡಿದ್ದೇನೆ. ಖಾತೆ ಬದಲಾವಣೆಗೆ ಯಾವುದೇ ಬೇಸರವಿಲ್ಲ. ಸಹೋದರ ಡಾ.ಕೆ.ಸುಧಾಕರ್ ಅವರು ವೈದ್ಯರು. ಡಾಕ್ಟರ್ 'ಆರೋಗ್ಯ' ಚೆನ್ನಾಗಿ ನೋಡಿಕೊಳ್ಳುತ್ತಾರೆ. ಹಾಗಾಗಿ ಆರೋಗ್ಯ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಜವಾಬ್ದಾರಿ ವಹಿಸಿಕೊಂಡಿದ್ದಾರೆ ಎಂದರು.

> **ಸಮಾಜ ಕಲ್ಯಾಣ ಎಂಬ ಪ್ರಭಾವಿ, ಬಲಿಷ್ಠ ಖಾತೆಯನ್ನು ಶ್ರೀರಾಮುಲು ಅವರಿಗೆ ನೀಡಲಾಗಿದೆ. ಇದೊಂದು ದೊಡ್ಡ ಇಲಾಖೆ. ಅವರಿಗೆ ಡೀಪ್ರಮೋಟ್ ಆಗಿಲ್ಲ, ಬದಲಿಗೆ ಪ್ರಮೋಷನ್ ಆಗಿದೆ. ನಮ್ಮಿಬ್ಬರೊಂದಿಗೂ ಮುಖ್ಯಮಂತ್ರಿಗಳು 2–3 ಬಾರಿ ಚರ್ಚಿಸಿಯೇ ತೀರ್ಮಾನ ಕೈಗೊಂಡಿದ್ದಾರೆ.**
>
> **• ಡಾ.ಕೆ. ಸುಧಾಕರ್, ಆರೋಗ್ಯ ಸಚಿವ**

**ಸಮನ್ವಯತೆ ಕೊರತೆ ನೀಗಿಸಲು ಕ್ರಮ:** ಬಳಿಕ ಪ್ರತಿಕ್ರಿಯಿಸಿದ ಡಾ.ಕೆ.ಸುಧಾಕರ್, ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಇಲಾಖೆಗಳಲ್ಲಿನ ಸಮನ್ವಯದ ಕೊರತೆ ನೀಗಿಸುವ ಜತೆಗೆ ಸೋಂಕನ್ನು ನಿಯಂತ್ರಣಕ್ಕೆ ತರುವಂತೆ ಮುಖ್ಯಮಂತ್ರಿಗಳು ಸೂಚಿಸಿದ್ದಾರೆ.

ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಕೆಳಹಂತದಲ್ಲಿ ತಾಂತ್ರಿಕ ಸಮಸ್ಯೆ ಉಂಟಾಗಿದೆ. ಜಿಲ್ಲಾಮಟ್ಟದಲ್ಲಿ ಆರೋಗ್ಯಾಧಿಕಾರಿಗಳು ಆರೋಗ್ಯ ಸಚಿವರಿಗೆ ಹಾಗೂ ವೈದ್ಯಕೀಯ ಕಾಲೇಜಿನ ಮುಖ್ಯಸ್ಥರು ವೈದ್ಯಕೀಯ ಶಿಕ್ಷಣ ಸಚಿವರಿಗೆ ವರದಿ ಮಾಡಬೇಕಾಗುತ್ತದೆ. ಅಲ್ಲಿ ಸಮನ್ವಯದ ಕೊರತೆ ಉಂಟಾಗಿದೆ. ಅನ್ಯ ರಾಜ್ಯಗಳಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಒಟ್ಟಿಗೆ ಇವೆ. ಈ ಸಮಸ್ಯೆ ಪರಿಹರಿಸಿ ಕೊರೊನಾ ನಿಯಂತ್ರಿಸಬೇಕು. ರಾಜ್ಯದ ಎಲ್ಲರಿಗೂ ಉತ್ತಮ ಆರೋಗ್ಯ ಸೇವೆ ದೊರೆಯುವಂತಾಗಬೇಕು ಎಂದು ಮುಖ್ಯಮಂತ್ರಿಗಳು ಸೂಚಿಸಿದ್ದಾರೆ ಎಂದು ಹೇಳಿದರು.

ನಾನು ಮತ್ತು ಸಚಿವ ಶ್ರೀರಾಮುಲು ಇಬ್ಬರೂ ಕಳೆದ 6 ತಿಂಗಳಿನಿಂದ ಪರಿಶ್ರಮ ಪಡುತ್ತಿದ್ದೇವೆ. ಇದರಲ್ಲಿ ಯಾರು ಹೆಚ್ಚು, ಯಾರು ಕಡಿಮೆ ಎಂಬ ಪ್ರಶ್ನೆ ಇಲ್ಲ. ಇದು ರಾಜ್ಯದ ಜನರ ಆರೋಗ್ಯದ ಪ್ರಶ್ನೆ. ಶ್ರೀರಾಮುಲು ಅಣ್ಣನವರು ಹಿರಿಯರು, ಒಳ್ಳೆಯ ನಾಯಕರು. ತಿಂಗಳಿನಿಂದ ಸಂಪುಟ ವಿಸ್ತರಣೆಯಾಗಬೇಕಿತ್ತು. ಆದರೆ ಬಿಹಾರ ಚುನಾವಣೆ ಕಾರಣದಿಂದ ಮುಂದೂಡುವ ಸ್ಥಿತಿ ಎದುರಾಗಿದೆ ಎಂದೂ ಸುಧಾಕರ್ ತಿಳಿಸಿದರು.